ಮಾಡಿ ಹೊರಗೆ ಹೋದರು. ಆ ನಂತರ ಬಂದರು. ಈಗ ನಿಮ್ಮ ನಿಲುವನ್ನು ನಾವು ಪ್ರಶ್ನೆ ಮಾಡುತ್ತಾ ಇಲ್ಲ. ಆದರೆ ನಿಮಗೆ ರೂಲ್ಸ್ ಸಸ್ಪೆಂಡ್ ಮಾಡಿ ಇವರಿಗೆ ಅವಕಾಶ ಮಾಡಿಕೊಡಲು ಅಧಿಕಾರ ಇದೆ. ಅದು ನ್ಯಾಯ ಅಲ್ಲವೇ? ಅವರು ಹೊರಗಡೆ ಹೋಗಿದ್ದರು. ದಯವಿಟ್ಟು ಅವರಿಗೆ ಅನುಕೂಲ ಮಾಡಿಕೊಡಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೇ, ಗೋಬರ್ ಗ್ಯಾಸ್ ಅನಿಲದ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ ನಮ್ಮ.....

ಅಧ್ಯಕ್ಷರು.—ಖಾರ್ಗೆಯವರೇ, ನಾನು ಏನು ಮಾಡಲಿ? ಆಗ ಉಪಾಧ್ಯಕ್ಷರೂ ಸಹ ಇರಲಿಲ್ಲ ಆದರೂ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ರೂಲ್ಸ್‌ನ್ನು ಸಸ್ಪೆಂಡ್ ಮಾಡಿ, ಮಾನ್ಯ ಕೃಷ್ಣನ್ ಅವರು ಹೇಳಿದ ಹಾಗೆ ಮತ್ತೆ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತಕ್ಕ ಅಧಿಕಾರ ನಿಮಗೆ ಇದೆ.

ಅಧ್ಯಕ್ಷರು.—ಮುಂದೆ ಈ ಬಗ್ಗೆ ವಿಚಾರ ಮಾಡೋಣ. ಖಾರ್ಗೆಯವರೇ ಇನ್ನೂ ಯಾರಾರೂ ಸದಸ್ಯರು ಸರಿಯಾಗಿ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮುಂದೆ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡಿ

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ ನಡೆಯುತ್ತಿದೆ. ನಂತರ ನಿಯಮ ೩೩ರ ಕೆಳಗೆ ಚರ್ಚೆ ಆದಮೇಲೆ ಈ ಬಗ್ಗೆ ವಿಚಾರ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆಮೇಲೆ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟರೆ ನಾವು ಕೂಡುತ್ತೇವೆ.

ಅಧ್ಯಕ್ಷರು.—ಈವಾಗ ೩೩ರ ಕೆಳಗೆ ಚರ್ಚೆ ಮುಂಗಿಯಲಿ. ಆಮೇಲೆ ನೋಡೋಣ ಎಂದು ಹೇಳಿದ್ದೇನೆ.

ಗಮನ ಸೆಳೆಯುವ ಸೂಚನೆ

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೆ, ನಾನು ಕರ್ನಾಟಕ ರಾಜ್ಯಾದ್ಯಂತ ಗೋಬರ್ ಅನಿಲದ ಯಂತ್ರದ ಸೂಪರ್‌ವೈಸರ್‌ಗಳನ್ನು ಇದುವರೆಗೂ ಯಾವುದೇ ರೀತಿಯ ಸೌಲಭ್ಯವಾಗಲೀ, ಮುಂದೆ ಅವರಿಗೆ ಉನ್ನತ ಹುದ್ದೆಗೆ ಬಡ್ತಿ ಕೊಡುವುದಕ್ಕಾಗಲೀ ಅವಕಾಶವಿಲ್ಲದಿರುವುದರಿಂದ ಅವರಿಗೆ ಖಾಯಂ ನೌಕರಿಗೆ ಅವಕಾಶ ಮಾಡಿ ಕೊಡಬೇಕಾಗಿರುತ್ತದೆ. ಈ ಕಾರಣಕ್ಕಾಗಿ ಒತ್ತಾಯಿಸಿ ಮುಷ್ಕರ ಮಾಡುವ ಹಂತದಲ್ಲಿದ್ದಾರೆ. ಆದ್ದರಿಂದ ಈ ನೌಕರರ ವಿಷಯದ ಬಗ್ಗೆ ಸರ್ಕಾರದವರ ಗಮನ ಸೆಳೆಯುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಈ ವಿಚಾರವನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ ಗೋಬರ್ ಅನಿಲ ಮೆಲ್ವಿಚಾರಕರ ಸೇವೆಯನ್ನು ಸ್ಥಿರಗೊಳಿಸುವಲ್ಲಿ ಸರ್ಕಾರಕ್ಕೆ ಈ ಕೆಳಗೆ ತಿಳಿಸಿರುವ ತಾಂತ್ರಿಕ ಹಾಗೂ ವ್ಯವಹಾರಿಕ ತೊಂದರೆಗಳಿವೆ.

ಇವರ ಮೂಲ ನೇಮಕಾತಿಯು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಆಗಿದ್ದು ಈ ಹುದ್ದೆಗಳಿಗೆ ಸೇವಾ ನಿಯಮಾವಳಿಗಳನ್ನು ರೂಪಿಸಿಲ್ಲ ಮತ್ತು ಇವರ ನೇಮಕಾತಿಯು ಹಂಗಾಮಿ ಸ್ವರೂಪವಾಗಿದೆ. ಕೆಲವು ಮಂದಿ ಗೋಬರ್ ಅನಿಲ ಮೇಲ್ವಿಚಾರಕರು ಈ ಹುದ್ದೆಗೆ ನೇಮಕ ಗೊಳ್ಳುವುದಕ್ಕಿಂತ ಮೊದಲು ಯುವಜನ ಸೇವಾ ಇಲಾಖೆಯಲ್ಲಿ ಕರ್ನಾಟಕ ಯುವದಳದ ಸ್ವಯಂಸೇವಕರಾಗಿದ್ದರು (ಕೆ.ವೈ.ಎಸ್.ಸಿ. ವಾಲಂಟಿಯರ್ಸ್) ಉಳಿದ ಕೆಲವರನ್ನು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ನೇರವಾಗಿ ನೇಮಕ ಮಾಡಿಕೊಂಡಿದೆ. ಕೆಲವು ಜನ

ಗೋಬರ್ ಅನಿಲ ಯಂತ್ರ ಮೇಲ್ವಿಚಾರಕರು ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರೂ ಆಗಿದ್ದಾರೆ. ಉಳಿದ ಕೆಲವರು ಪ್ರೌಢಶಿಕ್ಷಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದವರಾಗಿದ್ದಾರೆ.

೧-೮-೧೯೮೨ ರಿಂದ ಇವರ ಸೇವೆಯನ್ನು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಆಯಾ ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ವಹಿಸಿ ಕೊಡಲಾಗಿದೆ ಮತ್ತು ಖಾದಿ ಗ್ರಾಮೋದ್ಯೋಗ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಾಗ ಯಾವ ಸೇವಾ ನಿಯಮಾವಳಿಗಳು ಅವರಿಗೆ ಅನ್ವಯವಾಗುತ್ತಿದ್ದವೋ ಅವು ಅದೇ ರೀತಿಯಲ್ಲಿ ಮುಂದುವರಿಯಬೇಕೆಂದು ನಿರೂಪಿಸಲಾಗಿದೆ. ಇವರ ಸೇವಾ ಅವಧಿಯನ್ನು ೩೧ನೇ ಮಾರ್ಚ್ ೮೬ ರ ವರೆಗೆ ವಿಸ್ತರಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಇವರ ಸೇವೆಯನ್ನು ಸ್ಥಿರಗೊಳಿಸಲು ಈಗ ಸದ್ಯದಲ್ಲಿ ಸಾಧ್ಯವಿಲ್ಲವೆಂದು ಅಭಿಪ್ರಾಯ ಪಡಲಾಗಿದೆ. ಆದರೂ ಒಟ್ಟು ೧೭೫ ಹುದ್ದೆಗಳ ಪೈಕಿ ೭೭ ಹುದ್ದೆಗಳನ್ನು ಎರಡನೇ ದರ್ಜೆಯ ಗುಮಾಸ್ತೆಯ ವೇತನ ಶ್ರೇಣಿಯಲ್ಲಿ (ರೂ. ೪೯೦-೮-೫೫೦-೧೦-೬೫೦) ತೆಗೆದುಕೊಳ್ಳಲು ಭಾರತ ಸರ್ಕಾರದವರ ಅನುಮತಿಗಾಗಿ ಪತ್ರ ಬರೆಯಲಾಗಿದೆ, ಕಾರಣ ಅವರ ಸಂಬಳ ಸಾರಿಗೆ ವೆಚ್ಚ ಭಾರತ ಸರ್ಕಾರವೇ ವಹಿಸಿಕೊಳ್ಳುತ್ತದೆ. ಉಳಿದ ೯೮ ಹುದ್ದೆಗಳನ್ನು ಎರಡನೇ ದರ್ಜೆಯ ವೇತನ ಶ್ರೇಣಿಯಲ್ಲಿ ಆಗಲೀ ಅಥವಾ ಗ್ರಾಮ ಸೇವಕರ ಹುದ್ದೆಗಳಲ್ಲಿ ಪರಿವರ್ತಿಸುವ ವಿಚಾರವು ಕೇವಲ ಆನುಕಂಪಯುಕ್ತ, ಮಾನವೀಯತೆಯ ದೃಷ್ಟಿಯಿಂದ ಪರಿಶೀಲಿಸಲಾಗುತ್ತಿದೆ ಇವರು ಮೂಲತಃ ಸರ್ಕಾರ ಹುದ್ದೆಗಳಿಗೆ ಸೇರಿಲ್ಲ ಮತ್ತು ಮುಷ್ಕರ ಪಗೈರಿ ಕೈಗೊಂಡಲ್ಲಿ ಸಮಸ್ಯೆ ಜಟಿಲವಾಗುವ ಸಂಭವವಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಸ್ವಾಮಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಹಾಗೂ ಯುವಜನ ಸೇವಾ ಇಲಾಖೆಯಿಂದ ಈ ನೌಕರರನ್ನು ತಾವು ತೆಗೆದು ಕೊಂಡಿದ್ದೀರಿ. ಹೀಗೆ ಇವರನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಯಾವುದಾದರೊಂದು ಕಾನೂನನ್ನು ಅನ್ವಯಿಸಿ ತೆಗೆದುಕೊಳ್ಳಬೇಕಾಗಿತ್ತು. ಆದರೆ ನೀವು ಆರೀತಿ ಮಾಡಿಲ್ಲ. ಸುಮಾರು ೫-೬ ವರ್ಷಕಾಲ ಯಾವುದೇ ದೂರುಗಳೂ ಇಲ್ಲದೆ ಉತ್ತಮ ಸೇವೆಯನ್ನು ಇವರು ಸಲ್ಲಿಸುತ್ತಾ ಬಂದಿದ್ದರೂ ಅದು ಈಗ ಪ್ರಯೋಜನ ಇಲ್ಲವಾಗಿದೆ. ಇವರು ಹಿಂದೆ ಎರಡುಸಾರಿ ಮುಷ್ಕರ ಮಾಡಿದಾಗ ಈ ಖಾತೆಯ ಮಂತ್ರಿಗಳು ಆಶ್ವಾಸನೆ ನೀಡಿ ಇನ್ನು ಒಂದು ವರ್ಷದಲ್ಲಿ ನಿಮ್ಮ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ತಿಳಿಸಿದ್ದರು. ಈಗ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಿಂದ ಆಯಾ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಇವರ ಸೇವೆಯನ್ನು ವಹಿಸಿ ಕೊಡಲಾಗಿದೆ ಎಂದು ಹೇಳಿದ್ದೀರಿ. ಅಂದಮೇಲೆ ಇವರನ್ನು ಆ ಇಲಾಖೆಗೆ ಮತ್ತೆ ಕಳುಹಿಸಿಕೊಡುವುದರಲ್ಲಿ ಏನು ತೊಂದರೆ ಇದೆ? ಇವರಿಗೆ ಕೇವಲ ೩೦೦ ರೂಪಾಯಿ ಮಾತ್ರ ಸಂಬಳವನ್ನು ಕೊಡುತ್ತಿದ್ದೀರಿ ಅಷ್ಟೆ. ಯಾವುದೇರೀತಿಯ ಪ್ರಯಾಣ ಭತ್ಯವೂ ಇಲ್ಲ. ಇವರು ಪ್ರತಿಯೊಂದು ಹಳ್ಳಿಗೂ ಹೋಗಿ ಗೋಬರ್‌ಗ್ಯಾಸ್ ಪ್ಲಾಂಟ್‌ನ ಬಗ್ಗೆ ಪ್ರಚಾರ ಮಾಡುತ್ತಿದ್ದಾರೆ. ಇವರು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿರುವುದರಿಂದ ಹಿಂದೆ ಇದ್ದ ಮಾನ್ಯ ಸಚಿವರು ಏನು ಆಶ್ವಾಸನೆಯನ್ನು ನೀಡಿದ್ದರು ಅದನ್ನು ಈಡೇರಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ತಾ: ೧-೮-೮೨ ರಿಂದ ಇವರ ಸೇವೆಯನ್ನು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಿಂದ ಆಯಾ ತಾಲೂಕು ಅಭಿವೃದ್ಧಿ ಮಂಡಲಿಗೆ ವಹಿಸಿಕೊಡಲಾಗಿದೆ ಮತ್ತು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ವ್ಯಾಪ್ತಿಗೆ ಒಳಪಟ್ಟಾಗ ಯಾವ ಸೇವಾ ನಿಯಮಾವಳಿಗಳು ಅವರಿಗೆ ಅನ್ವಯ ಆಗುತ್ತಿದ್ದವೋ ಅದೇರೀತಿಯಲ್ಲಿ ಮುಂದುವರಿಯಬೇಕೆಂದು ನಿರೂಪಿಸಲಾಗಿದೆ. ೧೭೫ ಹುದ್ದೆಗಳ ಪೈಕಿ ೭೭ ಹುದ್ದೆಗಳನ್ನು ಎರಡನೇ ದರ್ಜೆಯ ಗುಮಾಸ್ತೆಯ ವೇತನ ಶ್ರೇಣಿಯಲ್ಲಿ ತೆಗೆದುಕೊಳ್ಳಲು ಭಾರತ ಸರ್ಕಾರದವರ ಅನುಮತಿಗಾಗಿ ಪತ್ರವನ್ನು ಬರೆಯಲಾಗಿದೆ. ಇನ್ನುಳಿದ ೯೮ ಹುದ್ದೆಗಳನ್ನು ಎರಡನೇ ದರ್ಜೆ ಗುಮಾಸ್ತರ ಅಥವಾ ಗ್ರಾಮ ಸೇವಕರ ಹುದ್ದೆಗಳಲ್ಲಿ ಪರಿವರ್ತಿಸುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆ. ಇದು ಸರ್ವೀಸ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್‌ಗೆ ಒಳಪಟ್ಟಿರುವುದರಿಂದ ಸ್ವಲ್ಪ ನಿಧಾನವಾಗಿದೆ. ಸರ್ಕಾರಇದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತದೆ.

ಶ್ರೀ ಆರ್ ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ನಾನು ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ.....

ಅಧ್ಯಕ್ಷರು.—ನೀವು ಕಳುಹಿಸಿಕೊಟ್ಟಿದ ನಿಲುವಳಿ ಸೂಚನೆಯನ್ನು ಬೇರೆ ರೀತಿ ಕನ್ವರ್ಟ್ ಮಾಡಿದ್ದೇನೆ. ನಿಮ್ಮ ನಿಲುವಳಿ ಸೂಚನೆಯನ್ನು ನಾನು ತಳ್ಳಿಹಾಕಿದ್ದೇನೆ. ಆದನ್ನು ನಾನು ಏನೂ

ಮಾಡುವುದಕ್ಕೆ ಬರುವುದಿಲ್ಲ. ನೀವು ಏನಾದರೂ ಮಾತನಾಡಬೇಕೆಂದು ಇದ್ದರೆ ದಯವಿಟ್ಟು ನನ್ನ ಕೊಠಡಿಗೆ ಬನ್ನಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಅದು ಬಹಳ ಮುಖ್ಯವಾದ ವಿಚಾರ. ತಾವು ದಯವಿಟ್ಟು.....

ಅಧ್ಯಕ್ಷರು.—ನೀವು ಈ ವಿಚಾರದಲ್ಲಿ ಏನಾದರೂ ಹೇಳುವುದಿದ್ದರೆ ದಯವಿಟ್ಟು ನನ್ನ ಕೊಠಡಿಗೆ ಬಂದು ಹೇಳಿ. ಈಗ ದಯವಿಟ್ಟು ನನಗೆ ಸಹಕಾರ ನೀಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಾನು ಹೇಳುವುದನ್ನು ತಾವು ಕೇಳಿ.....

ಅಧ್ಯಕ್ಷರು.—ಈಗಾಗಲೇ ನಾನು ಅದನ್ನು ಕನ್ಸರ್ಟ್ ಮಾಡಿದ್ದೇನೆ. ನಾನು ಏನು ರೂಲಿಂಗ್ ಕೊಟ್ಟಿದ್ದೇನೆ, ಅದನ್ನೂ ಕೂಡ ತಾವು ನೋಡಿ. ತಾವು ಹೊಸ ಸದಸ್ಯರು. ದಯವಿಟ್ಟು ಸದನದ ನಿಯಮಾವಳಿಗಳನ್ನು ಒಮ್ಮೆ ಓದಿ ನೋಡಿಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಿಯಮ ೫೯ ಏನು ಎಂಬುದನ್ನು ನಾನು ನೋಡಿದ್ದೇನೆ. ಈಗ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—ಪ್ರಶ್ನೋತ್ತರವೇಳೆ ಮುಗಿದು ಬಹಳ ಹೊತ್ತಾಯಿತು. ಈಗ ಗಮನಸೆಳೆಯುವ ಪ್ರಶ್ನೆಯನ್ನೂ ಮುಗಿಸಿ ಮುಂದೆ ನಿಯಮ ೩೩೪ ನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆ ೧ ಗಂಟೆಕಾಲ ಇರುತ್ತದೆ. ಆ ಸಂದರ್ಭದಲ್ಲಿ ಯಾವ ಯಾವ ಸದಸ್ಯರು ಇಲ್ಲಿ ಇರಲಿಲ್ಲವೋ ಅವರ ಹೆಸರುಗಳನ್ನೆಲ್ಲಾ ಮತ್ತೊಮ್ಮೆ ದಯವಿಟ್ಟು ಕರೆಯಿರಿ. ಇನ್ನೂ ಕಾಲಾವಕಾಶ ಇದೆ. ಪ್ರಶ್ನೆಯನ್ನು ಕೇಳಿರತಕ್ಕ ಸದಸ್ಯರ ಹೆಸರುಗಳನ್ನು ಮತ್ತೊಮ್ಮೆ ಕರೆಯಲು ತಮಗೆ ಅವಕಾಶ ಇದೆ. ದಯವಿಟ್ಟು ನಮಗೆ ಅವಕಾಶ ನೀಡಿ.

ಅಧ್ಯಕ್ಷರು.—ನಾನು ಉದ್ದೇಶಪೂರ್ವಕವಾಗಿ ಆ ರೀತಿ ಮಾಡಿಲ್ಲ. ಪ್ರಶ್ನೋತ್ತರಗಳು ಕೇವಲ ೨–೩ ನಿಮಿಷದಲ್ಲಿ ಮುಗಿದು ಹೋಯಿತು, ತಾವು ಹೊರಗೆ ಹೋದವರು ೨–೩ ನಿಮಿಷದಲ್ಲಿ ವಾಪಸು ಬರುತ್ತೀರೆಂದು ನಾನು ನೋಡಿದೆ. ಆದರೆ ನೀವು ಬರಲಿಲ್ಲ. ಆದ್ದರಿಂದ ನಿಮ್ಮ ಛಾನ್ಸ್ ಮುಗಿದು ಹೋಯಿತು. ಕೇವಲ ನಿಮ್ಮದು ಮಾತ್ರವಲ್ಲ. ಮಾನ್ಯ ಉಪಾಧ್ಯಕ್ಷರೂ ಕೂಡ ಅವರ ಒಂದು ವರದಿಯನ್ನು ಸಭೆಯ ಮುಂದೆ ಇಡಬೇಕಾಗಿತ್ತು. ಅವರೂ ಕೂಡ ಆಗ ಸದನದಲ್ಲಿ ಇರಲಿಲ್ಲ. ಅವರ ಛಾನ್ಸ್ ಹೋಯಿತು. ಇದಕ್ಕೆ ನಾನು ಏನೂ ಮಾಡುವುದಕ್ಕೆ ಬರುವುದಿಲ್ಲ. ಮತ್ತೆ ನಾನು ಹಿಂದಕ್ಕೆ ಹೋಗುವುದಕ್ಕಾಗುವುದಲ್ಲ.

ನಿಯಮ ೩೩೪ರ ಪ್ರಕಾರ

ಕಾಲೇಜು ವಿದ್ಯಾರ್ಥಿ ಸಂಘಗಳ ಚುನಾವಣೆ.

ಶ್ರೀ ವಿನಯ ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಕೆಲವು ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ನಿಲ್ಲಿಸಿಬಿಟ್ಟಿರುವ ಹಿನ್ನೆಲೆಯನು? ಈಗಾಗಲೇ ಕೆಲವು ಕಾಲೇಜುಗಳಲ್ಲಿ ಈ ಚುನಾವಣಾ ವಿಚಾರದಲ್ಲಿ ವಿದ್ಯಾರ್ಥಿಗಳು ತಮ್ಮ ಬೇಡಿಕೆ ಬಗ್ಗೆ ಮುಷ್ಕರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಚುನಾವಣೆಯ ಮಟ್ಟಿಗೆ ಮುಷ್ಕರ ನಡೆಸುತ್ತಿರುವ ವಿದ್ಯಾರ್ಥಿಗಳ ಮೇಲೆ ಅನಾವಶ್ಯಕವಾಗಿ ತಪ್ಪು ಕಲ್ಪನೆಯನ್ನು ರೂಪಿಸಿ, ವಿದ್ಯಾರ್ಥಿಗಳ ಮೇಲೆ ಪೋಲೀಸರ ಮುಖಾಂತರ ಶೀಘ್ರವಾದ ಒತ್ತಡವನ್ನು ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಸರಕಾರ ವಿದ್ಯಾರ್ಥಿಗಳ ನ್ಯಾಯ ಯುತವಾದ ಬೇಡಿಕೆಯನ್ನು ಈಡೇರಿಸದೆ ಈರೀತಿಯಾದ ಪೋಲೀಸರಿಂದ ಒತ್ತಡ ತರುವಂಥ ಕಾರ್ಯಕ್ರಮವನ್ನು ನಿಲ್ಲಿಸುತ್ತಿದೆಯೇ ಎನ್ನುವ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳು ತಿಳಿಸಬೇಕೆಂದು ಕೇಳುತ್ತೇನೆ ?

ಶ್ರೀ ಎಂ.ರಘುಪತಿ (ಮಾನ್ಯ ವಿದ್ಯಾ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವದ ತತ್ವಕ್ಕನುಗುಣವಾಗಿ ಚುನಾವಣೆಗಳು ನಡೆಯಬೇಕು. ಇದು ಶಾಲೆಗಳಲ್ಲಾಗಲಿ, ಕಾಲೇಜುಗಳಲ್ಲಾಗಲಿ